ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾದ ದಿನಾಂಕಃ 11-03-2019

**ಮುಂದುವರಿದ ಪಾಟೀಸವಾಲು ಃ- ಶ್ರೀ ಎಸ್ ಎನ್ ವಕೀಲರಿಂದಃ-** ನನ್ನ ಮತ್ತು ಮಸೀದಿ ಜಾಗದ ಮಧ್ಯದಲ್ಲಿ ಪ್ರತಿವಾದಿ ಜಾಗ ಇದೆ ಎಂದರೆ ಸರಿ. ಆ ಜಾಗದಲ್ಲಿ ಒಟ್ಟು 3 ಕಾಂಪ್ಲೇಕಸ ಇದೆ ಎಂದರೆ ಸರಿ. ಈ ಎಲ್ಲಾ ಕಾಂಪ್ಲೇಕಸ್ 2015ರ ಮೊದಲೇ ಪ್ರತಿವಾದಿ ಕಂದಾಯ ಪಾವತಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮೊದಲು 2 ಬಿಲ್ಡಿಂಗ್ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. 2017ರಲ್ಲಿ ಆ ರೀತಿ ಮೂರು ರೂಮ್‌ಗಳನ್ನು ಕಟ್ಟಿರುತ್ತಾರೆ. ಈ ದಾವೆಯನ್ನು ಹಾಕುವ ಎಷ್ಟು ಸಮಯದ ಮೊದಲು ಆ ಕಟ್ಟಡವನ್ನು ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈಗಿರುವ ಕಟ್ಟಡಗಳು 2015 ಕ್ಕಿಂತ ಮೊದಲೇ ಕಟ್ಟಲಾಗಿದ ಕಟ್ಟಡ ಎಂದರೆ ಸರಿಯಲ್ಲ. ನಾನು ಪಂಚಾಯಿತಿಗೆ ದೂರನ್ನು ಕೊಟ್ಟಿರುತ್ತೇನೆ. ನನ್ನ ಜಾಗದಲ್ಲಿ ಕಟ್ಟಡ ಕಟ್ಟುತ್ತಿದ್ದಾರೆಂದು ದೂರನ್ನು ಕೊಟ್ಟಿರುತ್ತೇನೆ. ನಾನು ನಗರ ಪಂಚಾಯಿತಿಗೆ ಹೊಳೆಯ ಪರಂಬುಕ್ಕೊ ಸ್ಥಳದಲ್ಲಿ ಕಟ್ಟಡ ಕ್ಕಟ್ಟುತಿದ್ದಾರೆಂದು ದೂರು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯ ಜಾಗದಲ್ಲಿ ಕಟ್ಟಡ ನಂಬ್ರ 2 –3 / 1, 2-3 /1 ಎ , 2-3 / 1ಬಿ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲಾ. ಈ ಕಟ್ಟಡಗಳು ಯಾವಾಗ ರಚನೆಯಾಯಿತು ಎಂದು ನಾನು ತಿಳಿದುಕೊಂಡಿಲ್ಲಾ. ನಾನು ಖರೀದಿಗೆ ತೆಗೆದುಕೊಂಡಾಗ ಗಡಿ ಗುರುತು ಮಾಡಿಸಿದ್ದೆನೆ. ಅಳತೆ ಮಾಡಿದ ಸರ್ವೆಯರ ಯಾರು ಎಂದು ನನಗೆ ಗೊತ್ತಿಲ್ಲಾ. ಅಳತೆ ಮಾಡಿದಾಗ ನೊಟ್ಟಿಸ್ಸು ಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲಾ. ಸಾಕೆಯು ಮುಂದುವರಿದು ಪೈನ್ಸ್‌ನ ಒಳಗೆ ಇರುವ ಸ್ಥಳವನ್ನು ಮಾತ್ರ ಅಳತೆ ಮಾಡಿದ್ದಾರೆ ಆಗ ಅದರಲ್ಲಿ 12ವರೆ ಸೆಂಟ್ ಜಾಗವಿತ್ತು. ನಾನು ದಾವೆ ಹಾಕುವ ಮೊದಲು ಅಳತೆ ಮಾಡಿಸಿದ್ದೇನೆ ಅದು ಯಾವಾಗ ಎಂದು ನನಗೆ ನೆನಪು ಇಲ್ಲ. ಆಗ ಅಕ್ಕಪಕ್ಕದವರಿಗೆ ನೋಟ್ಟಿಸ್ಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಹದುಬಸ್ತ ಅಳತೆಯನ್ನು ಯಾವ ಸರ್ವೆಯರ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2015ನೇ ಮೇ ತಿಂಗಳಲ್ಲಿ ನನ್ನ ಜಾಗವನ್ನು ಪ್ರತಿವಾದಿ ಸ್ವಾಧೀನಪಡಿಸಿಕೊಂಡಿರುತ್ತಾನೆ. ಆ ಕುರಿತು ನಾನು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ. ಪೋಲಿಸರಿಗೆ

ಕೊಟ್ಟ ದೂರಿನ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಮೇ ತಿಂಗಳಲ್ಲಿ ದೂರನ್ನು ಕೊಟ್ಟಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದು ಸಮಯವಕಾಶವನ್ನು ನೀಡಲಾಯಿತು.

ತೆ.ನ್ಯಾ.ಸಾ.ಹೇ. ನನ್ನ ಉ. ಬೆ. ಮಾಡಲಾಯಿತು.

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ,

ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಸುಳ್ಯ, ದ.ಕ.